	BELACHALVADY	0
	MANGALA (HOBLI HQ)	0
KOLLEGAL	VADAYARAPALYA	0
YELANDUR	GOWDAHALLI	0

1324(1720) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಪಶುಸಂಗೋಪನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯಾದ್ಯಂತ ಪಶುಗಳ ಆಹಾರ ಮತ್ತು ಮೇವು ಅಭಿವೃದ್ಧಿಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಆ) ಸರ್ಕಾರದ ವತಿಯಿಂದ ಯಾವ ಯಾವ ಆಹಾರ ಮತ್ತು ಮೇವನ್ನು ರೈತರಿಗೆ ವಿತರಿಸಲಾಗುತ್ತಿದೆ?

ಇ) ಸರ್ಕಾರ ವಿತರಿಸಲಾಗುತ್ತಿರುವ ಆಹಾರ ಮತ್ತು ಮೇವಿಗೆ ರಿಯಾಯಿತಿ ಸೌಲಭ್ಯವನ್ನು ಒದಗಿಸಲಾಗುತ್ತಿದೆಯೇ?

ಈ) ಹಾಗಿಲ್ಲದಿದ್ದಲ್ಲಿ, ಯಾವಾಗ ಒದಗಿಸಲಾಗುವುದು?

ಉ) ಪಶುಗಳ ಆಹಾರ ಮತ್ತು ಮೇವನ್ನು ರೈತರಿಗೆ ಯಾವ ಕೇಂದ್ರಗಳ ಮುಖಾಂತರ ವಿತರಿಸಲಾಗುವುದು?

ಊ) ಪಶುಗಳ ಆಹಾರ ಮತ್ತು ಮೇವನ್ನು ರೈತರಿಗೆ ಸುಲಭ ರೀತಿಯಲ್ಲಿ ಒದಗಿಸಲಾಗುತ್ತಿದೆಯೇ?

ಶ್ರೀ ರೇವು ನಾಯಕ್ ಬೆಳಮಗಿ (ಪಶುಸಂಗೋಪನೆ ಸಚಿವರು) :

ಅ) 2005–06ನೇ ಸಾಲಿನಲ್ಲಿ ಬರಪರಿಹಾರ ನಿಧಿಯಡಿಯಲ್ಲಿ 24 ಜಿಲ್ಲೆಗಳಲ್ಲಿ ಜಿಲ್ಲಾಧಿಕಾರಿಗಳ ಮೂಲಕ ಮೇವು ಬೀಜ ಖರೀದಿಗಾಗಿ ರೂ. 4.64 ಕೋಟಿ ಮಂಜೂರಾಗಿದ್ದು, ರೈತರಿಗೆ ಉಚಿತವಾಗಿ ಹಂಚುವ ಪ್ರಕ್ರಿಯೆ ಜಾರಿಯಲ್ಲಿದೆ.

2005–06ನೇ ಸಾಲಿನಲ್ಲಿ ಕೇಂದ್ರ ಪುರಸ್ಕೃತ ಮೇವು ಅಭಿವೃದ್ಧಿ ಕಾರ್ಯಕ್ರಮದಡಿಯಲ್ಲಿ ರೂ.1.00 ಕೋಟಿ ಬಿಡುಗಡೆಯಾಗಿದ್ದು, ಈ ಪೈಕಿ ರೂ. 50.00 ಲಕ್ಷಗಳನ್ನು ಬೀಜೋತ್ಪನ್ನ ಮಾಡುವ ರೈತರಿಂದ ಮೇವಿನ ಬೀಜ ಖರೀದಿಸಿ ನಿಗಧಿತ ಬೆಲೆಯಲ್ಲಿ ರೈತರಿಗೆ ನೀಡಲು ಹಾಗೂ ಹುಲ್ಲುಗಾವಲು ಅಭಿವೃದ್ಧಿಗಾಗಿ ಕೆ.ಎಂ.ಎಫ್ ಗೆ ನೀಡಲಾಗಿದೆ ಹಾಗೂ ಹುಲ್ಲುಗಾವಲು ಅಭಿವೃದ್ಧಿ ಮಾಡಲು ಬರ್ಡ್ಸ್ ಸಂಸ್ಥೆಗಳಿಗೆ ರೂ. 50.00 ಲಕ್ಷ ನೀಡಿದ್ದು, ಮೇವು ಅಭಿವೃದ್ಧಿ ಕಾರ್ಯಕ್ರಮ ಅನುಷ್ಠಾನಗೊಳಿಸಲಾಗುತ್ತಿದೆ. ಇದೇ ಯೋಜನೆಯಡಿಯಲ್ಲಿ ಈ ಸಾಲಿಗೆ 11.28

ಕೋಟಿಗಳ ಅನುದಾನವನ್ನು ಮೇವು ಅಭಿವೃದ್ಧಿ ಪ್ರಾತ್ಯಕ್ಷಿಕೆ ಹಾಗೂ ಹುಲ್ಲುಗಾವಲು ಅಭಿವೃದ್ಧಿ ಯೋಜನೆಗಾಗಿ ಯೋಜನೆ ತಯಾರಿಸಿ ಕೇಂದ್ರ ಸರ್ಕಾರದ ಅನುಮೋದನೆಗಾಗಿ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ.

ಪಶುಗಳ ಆಹಾರ ಉತ್ಪಾದನೆಗಾಗಿ ಕರ್ನಾಟಕ ರಾಜ್ಯದ ಸಹಕಾರಿ ಕ್ಷೇತ್ರವಾದ ಹಾಲು ಮಹಾಮಂಡಳಿ ವ್ಯಾಪ್ತಿಯಲ್ಲಿ ಕಾರ್ಯಾಚರಣೆಯಲ್ಲಿರುವ 4 ಪಶು ಆಹಾರ ಘಟಕಗಳಿಂದ ಸರಾಸರಿ ತಿಂಗಳೊಂದಕ್ಕೆ 16,497.94 ಮೆಟ್ರಿಕ್ ಟನ್ ಪಶು ಆಹಾರ ಉತ್ಪಾದನೆಯಾಗುತ್ತಿದೆ. ಹಾಸನದಲ್ಲಿ 200 ಮೆಟ್ರಿಕ್ ಟನ್ ಸಾಮರ್ಥ್ಯದ ನೂತನ ಪಶು ಆಹಾರ ಕಾರ್ಖಾನೆಯನ್ನು ಸ್ಥಾಪಿಸಲು ಪೂರಕ ಕ್ರಮ ಜಾರಿಯಲ್ಲಿದೆ. ಅದೇ ರೀತಿ ಖಾಸಗಿ ರಂಗದಲ್ಲಿರುವ 26 ಪಶು ಆಹಾರ ಉತ್ಪಾದನಾ ಘಟಕಗಳಿಂದ ವಾರ್ಷಿಕ 47,452.08 ಮೆಟ್ರಿಕ್ ಟನ್ ಆಹಾರ ಉತ್ಪಾದನೆ ಮಾಡಲಾಗುತ್ತಿದೆ.

ಆ) ಪಶು ಆಹಾರ ಮತ್ತು ಮೇವನ್ನು ವಿತರಿಸುವ ಯಾವುದೇ ಕಾರ್ಯಕ್ರಮ ಸರ್ಕಾರದಲ್ಲಿ ಇರುವುದಿಲ್ಲ.

ಇ) ರಾಜ್ಯದಲ್ಲಿ ಆಹಾರ ಮತ್ತು ಮೇವನ್ನು ರಿಯಾಯಿತಿ ದರದಲ್ಲಿ ವಿತರಿಸುವ ಕಾರ್ಯಕ್ರಮ ಇರುವುದಿಲ್ಲ. ಆದರೆ, ಪಶು ಆಹಾರ ಮಾರಾಟಕ್ಕೆ ಪೂರ್ಣ ತೆರಿಗೆ ವಿನಾಯಿತಿ ನೀಡಲಾಗಿದೆ.

ಈ) ರಿಯಾಯಿತಿ ದರದಲ್ಲಿ ರೈತರಿಗೆ ಆಹಾರ ಮತ್ತು ಮೇವನ್ನು ನೀಡುವ ಯಾವುದೇ ಪ್ರಸ್ತಾವನೆ ಇರುವುದಿಲ್ಲ.

ಉ) ಪಶು ಆಹಾರ ಮತ್ತು ಮೇವನ್ನು ರೈತರಿಗೆ ಯಾವುದೇ ಕೇಂದ್ರಗಳ ಮುಖಾಂತರ ವಿತರಿಸುತ್ತಿಲ್ಲ. ಆದರೆ, ಕರ್ನಾಟಕ ಹಾಲು ಮಹಾಮಂಡಳಿಯ ಮುಖಾಂತರ ಉತ್ಪಾದಿಸಲಾದ ಪಶು ಆಹಾರವನ್ನು ಹಾಲು ಉತ್ಪಾದಕರ ಸಹಕಾರ ಸಂಘಗಳ ಮುಖಾಂತರ ಬೇಡಿಕೆಗೆ ಅನುಗುಣವಾಗಿ ನಿಗದಿಯಾದ ಬೆಲೆಯಲ್ಲಿ ಮಾರಾಟ ಮಾಡಲಾಗುತ್ತಿದೆ.

ಊ) ರಾಜ್ಯದಲ್ಲಿ ರೈತರಿಗೆ ಸುಲಭ ರೀತಿಯಲ್ಲಿ ಪಶುಗಳ ಆಹಾರ ಮತ್ತು ಮೇವನ್ನು ವಿತರಿಸುವ ಯಾವುದೇ ಕಾರ್ಯಕ್ರಮ ಇರುವುದಿಲ್ಲ. ಆದರೆ, ಪಶು ಆಹಾರಕ್ಕೆ ಮಾರಾಟದ ಮೇಲೆ ಸಂಪೂರ್ಣ ತೆರಿಗೆ ವಿನಾಯತಿ ನೀಡಲಾಗಿದೆ.